ಕಾಲಿನಲ್ಲಿ ಗಾಯಗಳನ್ನು ಔಷಧಿ ಮಿಶ್ರಿತ ನೀರಿನಲ್ಲಿ (ಪೊಟ್ಯಾಶಿಯಂ ಪರಮಾಂಗನೇಟ್) ತೊಳೆದು ನೊಣ ಕೂರದಂತೆ ಬೇವಿನ ಎಣ್ಣೆ ಅಥವಾ ಮುಲಾಮು ಹಚ್ಚಬೇಕು.

6. ದನದ ಕೊಟ್ಟಿಗೆಯನ್ನು ಶುದ್ಧಗೊಳಿಸಲು ಶೇ. 4 ರಷ್ಟು ಸೋಡಿಯಂ ಕಾರ್ಬೋನೇಟ್ (ವಾಶಿಂಗ್ ಸೋಡ) ದ್ರಾವಣದಿಂದ ಸ್ವಚ್ಛಗೊಳಿಸುವುದು.

### ಕಾಲು ಬಾಯಿ ರೋಗದಿಂದ ಆಗುವ ಇತರೆ ಪರಿಣಾಮಗಳು

ಈ ಕಾಯಿಲೆ ಬಂದು ಹೋದ ನಂತರ ರಾಸಿನ ಜೀವನ ಪೂರ್ತಿ ಇದರ ಪರಿಣಾಮಗಳು ಉಳಿಯುತ್ತವೆ. ಇಂತಹ ರೋಗ ಬಂದು ಅದರಿಂದ ಚೇತರಿಸಿಕೊಂಡ ರಾಸುಗಳಲ್ಲಿ ಈ ಕೆಳಕಾಣಿಸಿದ ಪರಿಣಾಮಗಳು ಕಂಡುಬರುತ್ತವೆ.

- ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ.
- ಸರಿಯಾಗಿ ಬೆದೆಗೆ ಬರುವುದಿಲ್ಲ ಅಂದರೆ ಗರ್ಭದಾರಣೆಯಲ್ಲಿ ತೊಂದರೆ
- ಕೂದಲು ಒರಟಾಗಿ ಬಿಸಿಲಿಗೆ ತೇಕುತ್ತ ನೆರಳಿನಲ್ಲಿ ನಿಲ್ಲುತ್ತದೆ. ಆದ್ದರಿಂದ ಚರ್ಮದ ವ್ಯಾಪಾರದಲ್ಲಿ ನಷ್ಟವಾಗುತ್ತದೆ.
- ರೋಗಗ್ರಸ್ಥ ಎತ್ತುಗಳಲ್ಲಿ ಕೆಲಸವಾಡುವ ಸಾಮರ್ಥ್ಯ ಕಡಿಮೆಯಾಗುತ್ತದೆ.

### ಕಾಲು ಬಾಯಿ ರೋಗ ತಡೆಗಟ್ಟುವ ಮುಂಜಾಗ್ರತೆ ಕ್ರಮಗಳು

1. ಕಾಲು ಬಾಯಿ ಜ್ವರವು ವೈರಾಣುಗಳಿಂದ ಬರುವ ಕಾಯಿಲೆಯಾದ್ದರಿಂದ ಇದಕ್ಕೆ ಪರಿಣಾಮಕಾರಿಯಾದ ಚಿಕಿತ್ಸೆ ಇರುವುದಿಲ್ಲ. ಆದ್ದರಿಂದ ಮುಂಜಾಗ್ರತೆ ವಹಿಸಿ ರೋಗ ಬರದಂತೆ ತಡೆಯುವುದು ಒಳ್ಳೆಯದು. ಪ್ರತಿ ವರ್ಷ 2 ರಿಂದ 3 ಬಾರಿ ತಪ್ಪದೆ ಕಾಲು ಬಾಯಿ ರೋಗದ ಲಸಿಕೆಯನ್ನು ಹಾಕಿಸುವುದು (ಎಫ್.ಎಂ.ಡಿ. ಪಾಲಿವೇಲೆಂಟ್ ಜೆಲ್ ಲಸಿಕೆ) ಎಫ್.ಎಂ.ಡಿ. ಪಾಲಿವೆಂಟ್ ಆಯಿಲ್ ಲಸಿಕೆ ಹಾಕಿಸಿದ್ದಲ್ಲಿ 9 ರಿಂದ 12 ತಿಂಗಳ ಅಂತರದಲ್ಲಿ ಹಾಕಿಸುವುದು.
2. ರೋಗ ಪೀಡಿತ ಪ್ರದೇಶಗಳಿಂದ ಪಶುಗಳ ಆಹಾರವನ್ನು ಖರೀದಿಸುವುದು ಮತ್ತು ಅವುಗಳನ್ನು ರೋಗವಿಲ್ಲದ ಪ್ರದೇಶಕ್ಕೆ ತೆಗೆದುಕೊಂಡು ಹೋಗುವುದನ್ನು ನಿಯಂತ್ರಿಸಿ ತಡೆಗಟ್ಟುವುದು.
3. ರೋಗಗ್ರಸ್ಥ ಹಸುವನ್ನು ಕರುಗಳಿಂದ ತಕ್ಷಣವೇ ಬೇರ್ಪಡಿಸುವುದು ಮತ್ತು ಬೇರೆ ಹಸುವಿನ ಹಾಲನ್ನು ಕುಡಿಸುವುದು.
4. ಆಕಸ್ಮಾತ್ ರೋಗದಿಂದ ಜಾನುವಾರು ಸತ್ತರೆ ಅದರ ಸೂಕ್ತ ವಿಲೇವಾರಿ ಅತಿ ಮುಖ್ಯ ಅಂದರೆ ಆಳವಾದ ಗುಂಡಿ ತೆಗೆದು ತಳಕ್ಕೆ ಸುಣ್ಣ ಹರಡಿ ಕಳೆಬರವನ್ನು ಹಾಕಿ ಮತ್ತೆ ಅದರ ಮೇಲೆ ಸುಣ್ಣ ಹಾಕಿ ಮುಚ್ಚಬೇಕು.
5. ಸತ್ತ ದನಗಳಿಂದ ಚರ್ಮ ತೆಗೆಯುವುದನ್ನು ನಿಷೇಧಿಸಬೇಕು.

**"ಮುಂಜಾಗ್ರತೆಯಾಗಿ ಲಸಿಕೆ ಹಾಕಿಸುವುದರಿಂದ ಕಾಲು ಬಾಯಿ ರೋಗದಿಂದುಂಟಾಗುವ ಆರ್ಥಿಕ ಹಾನಿಯನ್ನು ತಡೆಗಟ್ಟಬಹುದು**


ಲೇಖಕರು
ಡಾ. ಎಸ್. ವೈ. ಮುಕರ್ತಾಳ

ಸಹ ಸಂಪಾದಕರು
ಶ್ರೀ ಡಿ. ಎಸ್. ಎಂ. ಗೌಡ

ಪ್ರಕಾಶಕರು ಮತ್ತು ಸಂಪಾದಕರು
ಡಾ. ಸರೋಜನಿ ಜೆ ಕರಕಣ್ಣವರ, ಕಾರ್ಯಕ್ರಮ ಸಂಯೋಜಕರು
ಬೆರಳಚ್ಚು : ಸರೋಜ ಬಿ. ತಳವಾರ ವಿನ್ಯಾಸ: ರೇಖಾ ಕೆ.ಎನ್.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – 581 115
ತಾ: ರಾಣೇಬೆನ್ನೂರು, ಜಿ. ಹಾವೇರಿ
(08373)253524, 94484–95338
ವಿದ್ಯುನ್ಮಾನ ಅಂಚೆ: kvk_haveri@rediffmail.com,
ಅಂತರಜಾಲ: www.kvkhaveri.org



ಪುಟ ವಿನ್ಯಾಸ:
ಡಿಟಿಪಿ ಘಟಕ, ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ


## ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಹೈನು ರಾಸುಗಳಲ್ಲಿ ಕಾಲು ಮತ್ತು ಬಾಯಿ ಜ್ವರ



## ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ
## ಹನುಮನಮಟ್ಟಿ 581 115
## ತಾ: ರಾಣೇಬೆನ್ನೂರು, ಜಿ: ಹಾವೇರಿ


ಸೆಪ್ಟೆಂಬರ್ - 2014 ಪ್ರತಿಗಳು: 1000

# ಹೈನು ರಾಸುಗಳಲ್ಲಿ ಕಾಲು ಮತ್ತು ಬಾಯಿ ಜ್ವರ

'ಕಾಲು ಬಾಯಿ ಜ್ವರ'ವು ಎಲ್ಲಾ, ಸೀಳು ಗೊರಸುಳ್ಳ ಪ್ರಾಣಿಗಳಲ್ಲಿ (ಸಾಕು ಮತ್ತು ಕಾಡು ಪ್ರಾಣಿಗಳು), ಅಂದರೆ ದನ, ಎಮ್ಮೆ, ಹಂದಿ, ಕುರಿ, ಮೇಕೆಗಳು ಹಾಗೂ ಕಾಡು ಪ್ರಾಣಿಗಳಾದ ಆನೆ, ಜಿಂಕೆ, ಕಾಡೆಮ್ಮೆ ಮತ್ತು ಇತರೆ ಪ್ರಾಣಿಗಳಲ್ಲಿ ವೈರಾಣುಗಳಿಂದ ಬರುವ ಒಂದು ಕಾಯಿಲೆ. ಈ ರೋಗವು ಬಹಳ ಸಾಂಕ್ರಾಮಿಕ ರೋಗವಾಗಿದ್ದು ಅತಿ ಬೇಗನೆ ಒಂದು ರಾಸಿನಿಂದ ಇನ್ನೊಂದಕ್ಕೆ ನೇರ ಸಂಪರ್ಕ ಹಾಗೂ ಗಾಳಿಯ ಮೂಲಕ ಹರಡುತ್ತದೆ. ಕಾಲು ಬಾಯಿ ಜ್ವರವು ಪ್ರಾಣಾಂತಿಕ ಕಾಯಿಲೆಯಲ್ಲವಾದರೂ ಈ ರೋಗದಿಂದ ರಾಸುಗಳಲ್ಲಿ ನಿಶ್ಯಕ್ತಿ ಹೆಚ್ಚಾಗಿ ಹಾಲಿನ ಇಳುವರಿ ಕಡಿಮೆ ಆಗುವುದರಿಂದ ತುಂಬ ಆರ್ಥಿಕ ಹಾನಿಯಾಗುತ್ತದೆ. ಈ ರೋಗದಿಂದ ನಮ್ಮ ರಾಷ್ಟ್ರಕ್ಕೆ, ಪ್ರತಿ ವರ್ಷ ಸುಮಾರು ರೂ.3,000 ಕೋಟಿ ನಷ್ಟವಾಗುತ್ತಿದೆ ಎಂದು ಅಂದಾಜು ಮಾಡಲಾಗಿದೆ.

ಕಾಲು ಬಾಯಿ ಜ್ವರವನ್ನುಂಟು ಮಾಡುವ ವಿಷಾಣುಗಳು ಪಿಕೊರ್ನಾ ವೈರಾಣುಗಳ ಗುಂಪಿಗೆ ಸೇರಿದ್ದು ಇದರಲ್ಲಿ 7 ಮುಖ್ಯ ಪ್ರಭೇದಗಳು ಇವೆ. ಅಂದರೆ O, A, C, Asia-1, SAT-1, SAT-2 and SAT-3 ಹಾಗೂ ಇದರಲ್ಲಿ ಅರವತ್ತಕ್ಕೂ ಹೆಚ್ಚಿನ ಉಪಪ್ರಭೇದಗಳು ಇರುತ್ತದೆ.

## ರೋಗದ ಲಕ್ಷಣಗಳು

ರೋಗಗ್ರಸ್ಥ ರಾಸುಗಳಲ್ಲಿ ಮೊದಲಿಗೆ ಜ್ವರ ಕಾಣಿಸುತ್ತದೆ (104–1060 ಎಫ್) ಮೇವು ತಿನ್ನುವುದು ನಿಲ್ಲುತ್ತದೆ, ಹಾಲು ಕಡಿಮೆಯಾಗಿ,









ನಂತರ ಕಾಲು ಕುಂಟುತ್ತದೆ. ಬಾಯಿಯಲ್ಲಿ ಚಿಕ್ಕ ಚಿಕ್ಕ ನೀರ್ಗುಳ್ಳೆಗಳಾಗಿ ಕ್ರಮೇಣ ಈ ಗುಳ್ಳೆಗಳು ಒಡೆದು ಜೊಲ್ಲು ಸುರಿಯುತ್ತದೆ. ಆಗಾಗ ನೋವಿನಿಂದ ಬಾಯಿ ಚಪ್ಪರಿಸುತ್ತದೆ. ಒಮ್ಮೊಮ್ಮೆ ನಾಲಿಗೆಯ ಮೇಲೆ ಹುಣ್ಣು ಜಾಸ್ತಿಯಾಗಿ ಅದರ ಮೇಲಿನ ಪದರವೇ ಕಿತ್ತು ಬರುವುದು. ಬಾಯಿ ಹುಣ್ಣಿಂದಾಗಿ ಮೇವು ತಿನ್ನಲು ನಿರಾಕರಿಸುತ್ತದೆ. ಕಾಲಿನ ಗೊರಸಿನ ಮಧ್ಯೆ ಹುಣ್ಣುಗಳಾಗಿ ನೊಣ ಕೂತು ಹುಳುಗಳಾಗುತ್ತವೆ. ಕೆಲವು ಹಸುಗಳಲ್ಲಿ ಕೆಚ್ಚಲಿನ ಮೇಲೆ ಗುಳ್ಳೆಗಳು ಕಾಣಿಸುತ್ತವೆ. ತುಂಬು ಗರ್ಭದ ರಾಸುಗಳಲ್ಲಿ ಗರ್ಭಪಾತವಾಗುವ ಸಂಭವ ಹೆಚ್ಚು. ಸುಮಾರು 8 ರಿಂದ 12 ದಿನ ಅಪಾರ ವೇದನೆಯಿಂದ ರಾಸುಗಳು ನರಳುತ್ತವೆ. ನಂತರ ಬಾಯಿಯಲ್ಲಿನ ಹುಣ್ಣುಗಳು ಕಡಿಮೆಯಾದಂತೆ ನಿಧಾನವಾಗಿ ಚೇತರಿಸಿಕೊಳ್ಳುತ್ತದೆ. ರೋಗಗ್ರಸ್ಥ ಕರುಗಳಲ್ಲಿ ಸಾವು ಉಂಟಾಗುತ್ತದೆ.

## ಕಾಲು ಬಾಯಿ ರೋಗವು ಹರಡುವ ವಿಧಾನ

ಕಾಲು ಬಾಯಿ ರೋಗವು ಒಂದು ರಾಸಿಗೆ ಬಂದರೆ ಸಾಮಾನ್ಯವಾಗಿ ನೆರೆ ಹೊರೆಯಲ್ಲಿರುವ ಎಲ್ಲ ಪ್ರಾಣಿಗಳಿಗೂ ಹರಡುತ್ತದೆ. ಅತಿ ಬೇಗನೆ ಒಂದು ರೋಗಗ್ರಸ್ಥ ರಾಸಿನ ಜೊಲ್ಲಿನಲ್ಲಿನ ರೋಗಾಣುಗಳು ಕಲುಶಿತಗೊಂಡ ಮೇವು ಮತ್ತು ನೀರಿನ ಮುಖಾಂತರ ಬೇರೆ ರಾಸುಗಳ ಜೊಲ್ಲಿನಲ್ಲಿ ಮಾತ್ರವಲ್ಲದೆ ಮೂತ್ರ, ಸಗಣಿ ವೀರ್ಯ ಮತ್ತು ಹಾಲಿನ ಮುಖಾಂತರವೂ ಹರಡುತ್ತದೆ. ವೈರಾಣುಗಳು ಎಷ್ಟು ಸೂಕ್ಷ್ಮವೆಂದರೆ ಅನೇಕ ಬಾತಿ ರೋಗಗ್ರಸ್ಥ ರಾಸಿನ ಕಡೆಯಿಂದ ಬೀಸುವ ಗಾಳಿಯ ಮೂಲಕವೂ ಸಹ ಕಾಯಿಲೆ ಹರಡುತ್ತದೆ. ಆದುದರಿಂದ ಈ ರೋಗವು ದನಗಳ ಜಾತ್ರೆಗಳಲ್ಲಿ ಕಾಣಿಸಿಕೊಂಡಲ್ಲಿ ಅತಿ ಬೇಗನೆ ಒಂದು ರಾಸಿನಿಂದ ಇನ್ನೊಂದು ರಾಸಿಗೆ ಹರಡುತ್ತದೆ. ಜಾತ್ರೆಗಳಿಂದ ಬಂದ ರೋಗಗ್ರಸ್ಥ ರಾಸುಗಳಿಂದ ಬೇರೆ ಬೇರೆ ಪ್ರದೇಶಗಳಿಗೆ ಶೀಘ್ರವಾಗಿ ಹರಡುತ್ತದೆ. ಅಲ್ಲದೆ ಇದು ಬಹಳ ಸಾಂಕ್ರಾಮಿಕ ರೋಗವಾದುದರಿಂದ ಕೆಲಸಗಾರರು ಮತ್ತು ವಾಹನಗಳ ಮೂಲಕವೂ ಸಹ ಹರಡುವ ಸಾಧ್ಯತೆ ಹೆಚ್ಚು.

ಕುರಿ, ಮೇಕೆ ಹಾಗೂ ಹಂದಿಗಳಲ್ಲಿ ದನದ ಮಾದರಿ ರೋಗ ಲಕ್ಷಣಗಳು ಕಣ್ಣಿಗೆ ಕಂಡರೂ ತೀವ್ರತೆ ಕಡಿಮೆ ಮತ್ತು ಹಂದಿ ಮರಿಗಳಲ್ಲಿ ಶೇ. 90–95 ರಷ್ಟು ಸಾವುಂಟಾಗುತ್ತದೆ.

## ರೋಗಗ್ರಸ್ಥ ರಾಸುಗಳಿಗೆ ಚಿಕಿತ್ಸೆ ಮತ್ತು ಕೈಗೊಳ್ಳಬೇಕಾದ ಕ್ರಮಗಳು

1. ರೋಗ ಕಂಡ ತಕ್ಷಣ ರೋಗಗ್ರಸ್ಥ ರಾಸುಗಳನ್ನು ಬೇರೆ ಆರೋಗ್ಯವಾದ ದನಗಳಿಂದ ಬೇರ್ಪಡಿಸಿ ಉಳಿದ ದನಗಳಿಗೆ ಹರಡದಂತೆ ನೋಡಿಕೊಳ್ಳುವುದು. ಅಂದರೆ, ಆರೋಗ್ಯವಾದ ರಾಸುಗಳಿಗೆ ಮೇವು, ನೀರು ಕೊಟ್ಟ ನಂತರ ಕೊನೆಗೆ ಕಾಯಿಲೆಯ ರಾಸಿಗೆ ಮೇವು, ನೀರು ನೀಡಿ ಆರೈಕೆ ಮಾಡಬೇಕು.
2. ರೋಗಗ್ರಸ್ಥ ರಾಸುಗಳ ಕಾಲು ಬಾಯಿ ಹುಣ್ಣನ್ನು ಶೇ. 0.5 ರಷ್ಟು ಸೋಡಿಯಂ ಬೈಕಾರ್ಬೋನೇಟ್ (ಅಡಿಗೆ ಸೋಡ) ದ್ರಾವಣದಿಂದ ದಿನಕ್ಕೆ ಮೂರು ಅಥವಾ ನಾಲ್ಕು ಬಾರಿ ಶುದ್ಧಗೊಳಿಸುವುದು ಮತ್ತು ಜೇನುತುಪ್ಪವನ್ನು ಬಾಯಿಯ ಒಳಭಾಗಕ್ಕೆ ಸವರುವುದು.
3. ತೀವ್ರವಾಗಿ ರೋಗದಿಂದ ನರಳುತ್ತಿರುವ ರಾಸುಗಳಿಗೆ ಇತರೆ ವಿಷ ಕ್ರಿಮಿಗಳಿಂದಾಗಬಹುದಾದ ಇತರೆ ರೋಗಗಳನ್ನು (ಗಳಲೇ ಮತ್ತು ನರಡಿ ರೋಗ) ತಪ್ಪಿಸಲು ಪ್ರತೀ ರಾಸುಗಳಿಗೆ ಜೀವ ನಿರೋಧಕವನ್ನು (ಅಂಟಿಬೈಯೋಟಿಕ್ಸ್) ಕೊಡುವುದು ಹಾಗೂ ಸೂಕ್ತ ಲಸಿಕೆಗಳನ್ನು ಮುಂಜಾಗ್ರತೆಯಾಗಿ ನೀಡಬೇಕು.
4. ತೀವ್ರ ರೋಗದಿಂದ ನರಳುತ್ತಿರುವ ಹೆಚ್ಚು ಬೆಲೆಬಾಳುವ ವಿದೇಶಿ ಮತ್ತು ಮಿಶ್ರ ತಳಿಯ ರಾಸುಗಳು ಶೀಘ್ರವಾಗಿ ಚೇತರಿಸಿಕೊಳ್ಳಲು ವಿಟಮಿನ್–ಎ ಅನ್ನಾಂಗದ ಚುಚ್ಚುಮದ್ದನ್ನು ನೀಡಬೇಕಾಗುತ್ತದೆ.
5. ಮೃದುವಾದ ಆಹಾರಗಳಾದ ಗಂಜಿ, ಬಾಳೆಹಣ್ಣು, ಹೂರಣ, ರಾಗಿ ಅಂಬಲಿ, ಹಸಿರು ಹುಲ್ಲು ಮುಂತಾದವುಗಳನ್ನು ತಿನ್ನಿಸುವುದು ಸಹಕಾರಿ.